# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1060
2. ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್,
3. ಉತ್ತರಿಸುವ ದಿನಾಂಕ : 14.12.2023
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಒಟ್ಟು ಕೆರೆಗಳೆಷ್ಟು; ಕೆರೆಗಳ ಸರ್ವೆ ಆಗಿದೆಯೇ; ಒತ್ತುವರಿಯಾಗಿರುವ ಕೆರೆಗಳ ಸಂಖ್ಯೆ ಎಷ್ಟು; ಒತ್ತುವರಿ ಪ್ರದೇಶ ಎಷ್ಟು; (ವಿವರವನ್ನು ಜಿಲ್ಲಾವಾರು ನೀಡುವುದು) | ರಾಜ್ಯದಲ್ಲಿ ಒಟ್ಟು 40521 ಕೆರೆಗಳು ಇರುತ್ತವೆ. ಇವುಗಳಲ್ಲಿ 22191 ಕೆರೆಗಳ ಸರ್ವೆ ಆಗಿದೆ. ಒತ್ತುವರಿ ಗುರುತಿಸಿದ ಕೆರೆಗಳ ಸಂಖ್ಯೆ 8836 ಒತ್ತುವರಿ ವಿಸ್ತೀರ್ಣ 38673 ಎಕರೆ, ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ | ಒತ್ತುವರಿಯನ್ನು ಸಂಪೂರ್ಣವಾಗಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈವರೆಗೆ ಎಷ್ಟು ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ; | ಕೆರೆಗಳ ಸರ್ವೆ ಕಾರ್ಯ ಕೈಗೊಂಡು ಒತ್ತುವರಿ ಕಂಡುಬಂದಲ್ಲಿ ಒತ್ತುವರಿ ತೆರವುಗೊಳಿಸಿ ಗಡಿ ಕಲ್ಲು ನೆಡುವುದು, ಬೌಂಡರಿ ಟ್ರೆಂಚ್ ನಿರ್ಮಾಣ, ಚೈನ್ ಲಿಂಕ್ ಫೆನ್ಸಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ. ಈವರೆಗೆ 4152 ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ. |
| ಇ | ರಾಜ್ಯದಲ್ಲಿ ಕೆರೆಗಳ ಸರ್ವೇ ಕಾರ್ಯ ಪೂರ್ಣಗೊಳ್ಳದಿರಲು ಕಾರಣಗಳೇನು; ಆದಷ್ಟು ಶೀಘ್ರ ಸರ್ವೆ ಕಾರ್ಯ ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಸರ್ವೇಯರ್‌ಗಳ ಕೊರತೆಯಿಂದಾಗಿ ಸರ್ವೇಕಾರ್ಯದಲ್ಲಿ ವಿಳಂಬವಾಗಿರುತ್ತದೆ. ಆದಾಗ್ಯೂ ಸರ್ವೇ ಕಾರ್ಯವನ್ನು ಕಂದಾಯ ಇಲಾಖೆಯ ಸಹಯೋಗದೊಂದಿಗೆ ಕೈಗೊಂಡು ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ. |
| ಈ | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕೆಲಸ ಏನು; ಪ್ರಾಧಿಕಾರ ಈ ವರೆಗೆ ಎಷ್ಟು ಬಾರಿ ಸಭೆ ಸೇರಿದೆ; ಒತ್ತುವರಿ ತೆರವುಗೊಳಿಸಲು ಹಾಗೂ ಕೆರೆಗಳ ಅಭಿವೃದ್ಧಿಗಾಗಿ ಪ್ರಾಧಿಕಾರ ಕೈಗೊಂಡಿರುವ ಕ್ರಮವೇನು; ಪ್ರಾಧಿಕಾರದಲ್ಲಿದ್ದ ಹಣವನ್ನು ಯಾವ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲಾಗಿದೆ? | ರಾಜ್ಯದಲ್ಲಿರುವ ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ 2014ರಲ್ಲಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ಜಾರಿಗೆ ಬಂದಿದ್ದು, ಇದಕ್ಕೆ 2018ರಲ್ಲಿ ತಿದ್ದುಪಡಿಯಾಗಿರುತ್ತದೆ. ಸದರಿ ಅಧಿನಿಯಮಗಳನ್ವಯ ಈ ಪ್ರಾಧಿಕಾರವು ರಾಜ್ಯದ ಎಲ್ಲಾ ಕೆರೆಗಳ (2000 ಹೆಕ್ಟೇರ್ ಮತ್ತುಅದಕ್ಕಿನ ಹೆಚ್ಚಿನ ಅಚ್ಚುಕಟ್ಟು ಹೊಂದಿರುವ ಕೆರೆಗಳನ್ನು ಹೊರತು ಪಡಿಸಿ) ಮೇಲೆ ನಿಯಾಮಕ ನಿಯಂತ್ರಣವನ್ನು (Regulatory Control) ಹೊಂದಿರುತ್ತದೆ.<br><br>ಪ್ರಾಧಿಕಾರವು ಈವರೆಗೆ 11 ಬಾರಿ ಸಭೆ ನಡೆಸಿದೆ.<br><br>ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 817/2008 ರಂತೆ 2012ರಲ್ಲಿ ನೀಡಲಾದ ನಿರ್ದೇಶನದನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿ ಕೆರೆಗಳ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳುತ್ತಿದ್ದು, ಪ್ರಾಧಿಕಾರದ ವತಿಯಿಂದ ನೇರವಾಗಿ ಒತ್ತುವರಿ ತೆರವುಗೊಳಿಸುವ ಕುರಿತು ಯಾವುದೇ ಕ್ರಮವಹಿಸಿರುವುದಿಲ್ಲ.<br><br>ಕೆರೆಗಳ ಉಸ್ತುವಾರಿ ಇಲಾಖೆಗಳ ಮುಖಾಂತರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲ್ಲಿಸಲ್ಪಡುವ ಯೋಜನಾ ವರದಿಗಳನ್ನು ಪ್ರಾಧಿಕಾರದ ತಾಂತ್ರಿಕ ಸಮಿತಿಯಲ್ಲಿ ಮಂಡಿಸಿ ಅವುಗಳಿಗೆ ಹೈಕೋರ್ಟ್ / ಎನ್.ಜಿ.ಟಿ ನಿರ್ದೇಶನಗಳನ್ವಯ ಹಾಗೂ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದನುಸಾರ ತಾಂತ್ರಿಕ ತೀರುವಳಿ ನೀಡಲಾಗುತ್ತಿದೆ.<br><br>ಸರ್ಕಾರದಿಂದ ಕೆರೆ ಸಂಜೀವಿನಿ ಯೋಜನೆಗೆ ಮಾತ್ರ ಅನುದಾನವನ್ನು ಪ್ರಾಧಿಕಾರಕ್ಕೆ ಹಂಚಿಕೆ ಮಾಡಲಾಗುತ್ತಿದ್ದು, ಸದರಿ ಅನುದಾನವನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಕೆರೆಗಳ ಹೂಳು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |

ಕಡತ ಸಂಖ್ಯೆ:MID 76 LCQ 2023

(ಎನ್.ಎಸ್. ಭೋಸರಾಜು)
ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

# ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಪ್ರಶ್ನೆ ಸಂಖ್ಯೆ : 1060 ಕ್ಕೆ ಸಂಬಂಧಿಸಿದ ಅನುಬಂಧ

| ಕ್ರ.ಸಂ | ಜಿಲ್ಲೆ | ಕೆರೆಗಳ ಸಂಖ್ಯೆ | ಕೆರೆಗಳ ವಿಸ್ತೀರ್ಣ (ಎಕರೆಗಳಲ್ಲಿ) | ಅಳತೆ ಯಾಗಿರುವ ಕೆರೆಗಳ | | ಅಳತೆ ಮಾಡಿಸಲು ಬಾಕಿ ಇರುವ ಕೆರೆಗಳ | | ಒತ್ತುವರಿ ಗುರುತಿಸಿರುವ ಕೆರೆಗಳ | | ಒತ್ತುವರಿ ತೆರವುಗೊಳಿಸಿರುವ | | ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಕೆರೆಗಳ | |
|---|---|---|---|---|---|---|---|---|---|---|---|---|---|
| | | | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| 1 | ಬಾಗಲಕೋಟೆ | 268 | 5881 | 266 | 5780 | 2 | 88 | 70 | 709 | 5 | 72 | 65 | 637 |
| 2 | ಬೆಂಗಳೂರು ಗ್ರಾಮಾಂತರ | 710 | 30033 | 710 | 30033 | 0 | 0 | 643 | 6252 | 614 | 5943 | 29 | 309 |
| 3 | ಬೆಂಗಳೂರು ನಗರ | 837 | 28264 | 837 | 27548 | 0 | 0 | 733 | 4552 | 480 | 2613 | 253 | 1913 |
| 4 | ಬೆಳಗಾವಿ | 1144 | 7761 | 860 | 4308 | 284 | 3453 | 45 | 100 | 12 | 27 | 33 | 73 |
| 5 | ಬಳ್ಳಾರಿ | 98 | 7966 | 96 | 5371 | 2 | 2595 | 41 | 836 | 16 | 407 | 25 | 429 |
| 6 | ಬೀದರ್ | 344 | 26755 | 119 | 5173 | 225 | 21582 | 15 | 220 | 11 | 25 | 4 | 25 |
| 7 | ಚಾಮರಾಜ ನಗರ | 606 | 14507 | 598 | 13909 | 8 | 589 | 277 | 2339 | 218 | 2203 | 59 | 139 |
| 8 | ಚಿಕ್ಕಬಳ್ಳಾಪುರ | 1533 | 53556 | 642 | 28980 | 891 | 24575 | 333 | 2762 | 281 | 2291 | 52 | 473 |
| 9 | ಚಿಕ್ಕಮಗಳೂರು | 1731 | 17753 | 1595 | 15977 | 136 | 1775 | 676 | 3622 | 65 | 135 | 611 | 3487 |
| 10 | ಚಿತ್ರದುರ್ಗ | 419 | 56307 | 296 | 44115 | 123 | 12192 | 47 | 1470 | 9 | 560 | 38 | 910 |
| 11 | ದಕ್ಷಿಣ ಕನ್ನಡ | 644 | 418 | 622 | 408 | 22 | 10 | 87 | 31 | 14 | 14 | 73 | 16 |
| 12 | ದಾವಣಗೆರೆ | 488 | 22145 | 477 | 16494 | 11 | 5651 | 259 | 1777 | 2 | 52 | 257 | 1725 |
| 13 | ಧಾರವಾಡ | 1261 | 7057 | 1097 | 6580 | 164 | 477 | 168 | 213 | 11 | 37 | 157 | 176 |
| 14 | ಗದಗ | 295 | 5573 | 180 | 4266 | 115 | 1307 | 43 | 70 | 1 | 1 | 42 | 69 |
| 15 | ಹಾಸನ | 6869 | 62782 | 1848 | 11753 | 5021 | 51029 | 835 | 822 | 268 | 245 | 567 | 577 |
| 16 | ಹಾವೇರಿ | 2058 | 22517 | 538 | 10148 | 1520 | 12368 | 126 | 223 | 40 | 109 | 86 | 113 |
| 17 | ಕಲಬುರ್ಗಿ | 254 | 10494 | 232 | 9697 | 22 | 797 | 6 | 54 | 0 | 0 | 6 | 54 |
| 18 | ಕೊಡಗು | 547 | 426 | 539 | 414 | 8 | 12 | 111 | 75 | 74 | 49 | 37 | 26 |
| 19 | ಕೋಲಾರ | 2520 | 55812 | 632 | 10804 | 1888 | 45008 | 619 | 1567 | 615 | 1544 | 4 | 23 |
| 20 | ಕೊಪ್ಪಳ | 207 | 8841 | 207 | 8841 | 0 | 0 | 30 | 209 | 10 | 6 | 20 | 203 |
| 21 | ಮಂಡ್ಯ | 1077 | 44284 | 519 | 15697 | 558 | 28586 | 302 | 2694 | 171 | 2364 | 131 | 330 |
| 22 | ಮೈಸೂರು | 2991 | 24710 | 1792 | 13859 | 1199 | 10650 | 1334 | 1900 | 465 | 788 | 869 | 1135 |
| 23 | ರಾಯಚೂರು | 319 | 9847 | 135 | 3684 | 184 | 6174 | 34 | 169 | 0 | 0 | 34 | 169 |
| 24 | ರಾಮನಗರ | 1496 | 20801 | 417 | 4182 | 1079 | 16124 | 293 | 435 | 84 | 190 | 209 | 245 |
| 25 | ಶಿವಮೊಗ್ಗ | 4835 | 35341 | 1794 | 13152 | 3041 | 22188 | 836 | 2450 | 356 | 781 | 480 | 1654 |
| 26 | ತುಮಕೂರು | 2061 | 115582 | 768 | 26409 | 1293 | 98495 | 402 | 1056 | 0 | 0 | 402 | 1056 |
| 27 | ಉತ್ತರ ಕನ್ನಡ | 2071 | 5460 | 1545 | 3911 | 526 | 1548 | 329 | 113 | 219 | 71 | 110 | 42 |
| 28 | ಉಡುಪಿ | 2030 | 1075 | 2030 | 1075 | 0 | 0 | 59 | 10 | 47 | 6 | 12 | 4 |
| 29 | ವಿಜಯನಗರ | 190 | 25528 | 185 | 25362 | 5 | 165 | 80 | 1930 | 64 | 1838 | 16 | 91 |
| 30 | ವಿಜಯಪುರ | 267 | 13427 | 267 | 13427 | 0 | 0 | 3 | 13 | 0 | 0 | 3 | 13 |
| 31 | ಯಾದಗಿರಿ | 351 | 16267 | 348 | 16093 | 3 | 174 | 0 | 0 | 0 | 0 | 0 | 0 |
| | | **40521** | **757170** | **22191** | **397450** | **18330** | **367612** | **8836** | **38673** | **4152** | **22371** | **4684** | **16116** |